# ಮುನ್ನುಡಿ

ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಕಣ್ವತೀರ್ಥ ಈ ಶಾಲೆಯು ಮಂಜೇಶ್ವರ ಗ್ರಾಮ ಪಂಚಾಯತಿನ ನಾಲ್ಕನೇ ವಾರ್ಡ್, ಕುಂಜತ್ತೂರು ಗ್ರಾಮ ಕುಂಜತ್ತೂರು ಪದವು ಎಂಬಲ್ಲಿದೆ. 1972 ರಲ್ಲಿ ಸ್ಥಾಪನೆ ಗೊಂಡ ಈ ಶಾಲೆಯು ಕಣ್ವತೀರ್ಥ ಮಠದ ಹತ್ತಿರ ಮುಳಿ ಹುಲ್ಲು ಹಾಸಿದ ಶಾಲೆಯಾಗಿತ್ತು. ಕ್ರಮೇಣ ಅದು ಮುರಿದು ಬಿದ್ದುದರಿಂದ ಮುಚ್ಚಿಕೊಂಡ ಶಾಲೆಯು ಕುಂಜತ್ತೂರು ಪದವಿನಲ್ಲಿ ಪುನಃ ಸ್ಥಾಪನೆ ಗೊಂಡಿತ್ತು. ಮೊದಲಿಗೆ ಒಂದು ಮನೆಯಲ್ಲಿ ಪ್ರಾರಂಭಗೊಂಡ ಈ ಶಾಲೆಗೆ ಸರಕಾರವು 1979 ರಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಿ ಕೊಟ್ಟಿತ್ತು. ಇದರಲ್ಲಿ ಒಂದರಿಂದ ನಾಲ್ಕರವರೆಗೆ ತರಗತಿಗಳನ್ನು ಒಂದೊಂದೇ ವಿಭಾಗವನ್ನು ಹೊಂದಿತ್ತು. ಕ್ರಮೇಣ ಮಕ್ಕಳ ಸಂಖ್ಯೆಯು ಅಧಿಕವಾದಂತೆ ಹಂತ ಹಂತವಾಗಿ ಪ್ರತೀ ತರಗತಿಯಲ್ಲಿಯೂ ಎರಡೆರಡು ವಿಭಾಗಗಳಾದವು . ಈ ಎಲ್ಲಾ ತರಗತಿಗಳು ಒಂದೇ ಕಟ್ಟಡದ ಒಳಗೆ ನಡೆಯುತ್ತಿದ್ದವು.

1955 ರ ನಂತರ DEEP ಯಿಂದ ಹಂತ ಹಂತವಾಗಿ ಮೂರೂ ತರಗತಿ ಕೋಣೆಗಳು ನಿರ್ಮಾಣಗೊಂಡವು. EAS ವತಿಯಿಂದ ಇನ್ನೊಂದು ಕೋಣೆಯೂ ಒದಗಿಸಲ್ಪಟ್ಟಿತ್ತು. ಪ್ರಸ್ತುತ ಶಾಲಾ ಕಟ್ಟಡವು L ಆಕಾರದಲ್ಲಿದೆ . ಶಾಲಾ ಮುಂಭಾಗದಲ್ಲಿ ವಿಶಾಲವಾದ ಆಟದ ಬಯಲು ಇದೆ. ಶಾಲೆಯ ಎದುರು ಧ್ವಜಸ್ತಂಭ, ರಂಗ ಮಂಟಪ ಹಾಗೂ ಬಾವಿ ಇದೆ. ಶಾಲೆಯ ಸ್ಥಳದ ಒಟ್ಟು ವಿಸ್ತೀರ್ಣ 1 ಎಕ್ಕರೆ 1 ಸೆಂಟ್ಸ್ ಆಗಿದೆ.

ಪ್ರಸ್ತುತ ನಮ್ಮ ಶಾಲೆಯು ಆವಶ್ಯವಾದ ಸೌಕರ್ಯಗಳನ್ನು ಹೊಂದಿದ್ದು ಉತ್ತಮ ಕಲಿಕಾ ವಾತಾವರಣ ವನ್ನು ಹೊಂದಿದೆ. ಆಂಗ್ಲ ಮಾಧ್ಯಮದ ವ್ಯಾಮೋಹ ದಿಂದ ಹೆತ್ತವರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಕಳುಹಿಸುವಲ್ಲಿ ಹಿಂದೇಟು ಹಾಕುತ್ತಿರುವುದರಿಂದ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಕಡಿಮೆಯಾಗುತ್ತಿದೆ. 2025-26 ರಲ್ಲಿ ಒಟ್ಟು 140 ಕ್ಕಿಂತ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಒಂದನೇ ತರಗತಿ ಯಿಂದಲೇ ಕನ್ನಡ, ಮಲಯಾಳಂ, ಇಂಗ್ಲಿಷ್ ಮತ್ತು ಅರೇಬಿಕ್ ಭಾಷಾ ಭೋದನೆ, ಕಂಪ್ಯೂಟರ್ ಶಿಕ್ಷಣ ಒದಗಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಬರಬಹುದೆಂಬ ಆಶಾಭಾವನೆಯನ್ನಿರಿಸುವ.

# PROFILE

| | | |
|---|---|---|
| Name of school with Land Number | : | GLPS Kanwathirtha |
| Name of Revenue Village / Ward | : | IV – 435 Kunjathur Bail |
| Name of Cluster (CRC) | : | GLPS– Kanwathirtha |
| Name of Panchayath | : | Manjeshwar |
| Name of District | : | Kasaragod |
| Name of H. M with mobile Number | : | MOHANA U |

# ಶೈಕ್ಷಣಿಕ ಮಂಡಲ

## 2025 - 2026

1. ಓದುವಿಕೆಗೆ ಪ್ರೋತ್ಸಾಹ ನೀಡುವಂತಹ ಚಟುವಟಿಕೆಗಳನ್ನು ಮುಂದುವರಿಸುವುದು.
2. ಪ್ರತಿ ತರಗತಿಗೂ ಸಂಚಿಕೆಗಳು ಮತ್ತು ಹಸ್ತ ಪತ್ರಿಕೆಗಳು, ಪ್ರತಿ ತರಗತಿಯಲ್ಲಿ ಓದುವ ಮೂಲೆಗೆ ಮಕ್ಕಳ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು.
3. ಮಾಹಿತಿ ತಂತ್ರಜ್ಞಾನ ಆಧಾರಿತ ಕಲಿಕೆಗೆ ಹೆಚ್ಚು ಪ್ರೋತ್ಸಾಹ ನೀಡುವುದು.
4. ವಿಜ್ಞಾನ, ಗಣಿತ ಹಾಗೂ ಭಾಷಾ ಪ್ರಯೋಗಾಲಯಗಳ ಮೂಲಕ ಪ್ರಾಯೋಗಿಕ ಕಲಿಕೆಗೆ ಒತ್ತು ನೀಡುವುದು.
5. ವಿವಿಧ ರೀತಿಯ ಗುಂಪು ಚಟುವಟಿಕೆಗಳಿಗೆ ಕಲೆ, ಆಟೋಟ ,ವೃತ್ತಿಪರಿಚಯ ಚಟುವಟಿಕೆಗಳಲ್ಲಿ ಭಾಗವಹಿಸುವುದು.
6. ವಿವಿಧ ದಿನಾಚರಣೆ ಗಳನ್ನು ಶಾಲ ಮಟ್ಟದಲ್ಲಿ ಆಚರಿಸುವ ಮೂಲಕ ದಿನದ ಮಹತ್ವವನ್ನು ತಿಳಿಯಪಡಿಸುವುದು.
7. ಜೈವವೈವಿಧ್ಯ ಉದ್ಯಾನವನ ಹಾಗೂ ತರಕಾರಿ ತೋಟದ ನಿರ್ಮಾಣದ ಮೂಲಕ ಪ್ರತಿ ಮಗುವಿನ ಮನೆಯಲ್ಲೂ 'ಅಡುಗೆ ಮನೆಗೊಂದು ಕೈತೋಟ' ಎಂಬ ಆಶಯವನ್ನು ಎಲ್ಲಾ ಮನೆಗಳಿಗೆ ತಲುಪಿಸುವುದು.
8. ಶಾಲಾ ಪರಿಸರ ಶುಚೀಕರಣ, ವ್ಯಕ್ತಿ ಶುಚಿತ್ವ ಮನೆಯ ಶುಚಿತ್ವ ಎಂಬ ಆಶಯ ಕ್ರೋಡೀಕರಣಕ್ಕಾಗಿ ವಿವಿಧ ಪೋಸ್ಟ ರ್, ಭಿತ್ತಿ ಪತ್ರಿಕೆಗಳ ಮೂಲಕ ಜಾಗೃತಿ ಮೂಡಿಸುವುದು.

9. ಸ್ಪರ್ಧಾತ್ಮಕ ಪರೀಕ್ಷೆಗೆ ಅನುಕೂಲವಾಗುವಂತೆ LSS, Science Quiz, Social Science Quiz, Maths Quiz, Arabic Quiz ಗೆ ಬೇಕಾದ ತರಬೇತಿಯನ್ನು ಒದಗಿಸಲು ಪ್ರತ್ಯೇಕ ತರಗತಿಗಳನ್ನು ಶಾಲೆಯಲ್ಲಿ, Google meet, Whatsapp , Telegram ಗುಂಪುಗಳ ಮೂಲಕ ನಡೆಸಿ ಕೊಡುವುದು.

10. ಬರವಣಿಗೆಯನ್ನು ಉತ್ತಮಪಡಿಸುವ ಚಟುವಟಿಕೆಯನ್ನು ಮುಂದುವರಿಸುವುದು.

11. ಮಕ್ಕಳ ಸೃಜನಾತ್ಮಕತೆಯನ್ನು ವೃದ್ಧಿಪಡಿಸಲು ವಿವಿಧ ರೀತಿಯ ಸ್ಪರ್ಧೆಗಳನ್ನು ಏರ್ಪಾಡಿಸುವುದು ಅದರಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು.

12. ಮಕ್ಕಳ ಶಾರೀರಿಕ ಬೆಳವಣಿಗೆಗೆ ಅಗತ್ಯವಾದ ವ್ಯಾಯಾಮ, ಆಟೋಟ ,ಯೋಗ ಚಟುವಟಿಕೆಗಳನ್ನು ಶಾಲಾ ಆಸೆಂಬ್ಲಿಯಲ್ಲಿ ಮಾಡಿಸುವುದು. ಮಕ್ಕಳ ಗಮನ ಕೇಂದ್ರೀಕರಿಸುವಿಕೆ, ಶಾರೀರಿಕ ಹಾಗೂ ಮಾನಸಿಕ ಮಟ್ಟ ಹೆಚ್ಚಿಸುವುದು.

13. ಇಂಗ್ಲಿಷ್ ಕಲಿಕೆಗೆ ಪ್ರೋತ್ಸಾಹ ನೀಡುವುದು.

14. ಮಕ್ಕಳಲ್ಲಿ ಕಲಿಕೋಪಕರಣ ಗಳನ್ನು ಸಂಗ್ರಹಿಸುವುದು ಮತ್ತು ಅದನ್ನು ಉಪಯೋಗಿಸಿಕೊಂಡು ಸ್ವ ಕಲಿಕೆಯನ್ನು ಉತ್ತಮಪಡಿಸುವುದು.

| ಕ್ರ ಸಂಖ್ಯೆ | ವಿಷಯ | ಮಂಡಲ | ಚಟುವಟಿಕೆ | ಕಾಲಾವಧಿ | ಜವಾಬ್ದಾರಿ | ತಿಂಗಳು | ಖರ್ಚು | REMARKS |
|---|---|---|---|---|---|---|---|---|
| 01 | ಓದುವಿಕೆ ಮತ್ತು ಬರವಣಿಗೆ | ★ ಓದುವಿಕೆ ಮತ್ತು ಬರವಣಿಗೆಗೆ ಪ್ರೋತ್ಸಾಹ ನೀಡುವ ಚಟುವಟಿಕೆಗಳನ್ನು ನೀಡುವುದು.<br>★ ಮಾಹಿತಿ ಜ್ಞಾನ ಆಧಾರಿತ ಕಲಿಕೆಗೆ ಒತ್ತು ನೀಡುವುದು.<br>★ ಮಕ್ಕಳ ಸೃಜನಾತ್ಮಕ ಕಲಿಕೆಗೆ ಪೂರಕವಾದ ಚಟುವಟಿಕೆಯನ್ನು ನೀಡುವುದು. | ★ ಶಾಲಾ ಅಸೆಂಬ್ಲಿಯಲ್ಲಿ ಬದುಕಿಗೆ ಅಗತ್ಯವಾದ ವಾರ್ತಾಪತ್ರಿಕೆಯ ತುಣುಕುಗಳನ್ನು ಓದಿಸುವುದು.<br>★ ಮಕ್ಕಳು ರಸಪ್ರಶ್ನೆ ಕಥೆ-ಚಿತ್ರಕಥೆ ಒಗಟು ನಗೆಹನಿ ವ್ಯಕ್ತಿ ಪರಿಚಯಗಳನ್ನು ಓದುವುದು.<br>★ ದಿನದ ಮಹತ್ವವನ್ನು ಐಟಿ ಆಧಾರಿತವಾಗಿ ಮಕ್ಕಳಿಗೆ ತಿಳಿಯುವಂತೆ ಮಾಡುವುದು.<br>★ ಮಕ್ಕಳ ಸೃಜನಾತ್ಮಕ ಚಟುವಟಿಕೆ ಇಂದ ಬಂದಂತಹ ಉತ್ಪನ್ನಗಳನ್ನು ಪ್ರದರ್ಶಿಸುವುದು ಹುರಿದುಂಬಿಸುವುದು<br>★ ಶಾಲಾ ಲೈಬ್ರರಿ ತರಗತಿ ಓದುವ ಮೂಲೆಯನ್ನು ಉತ್ತಮಪಡಿಸುವುದು. | 2025-26 | ಅಧ್ಯಪಕರು | June - March | 1000/- | |
| 02 | SRG | ವಾರಕ್ಕೊಮ್ಮೆ SRG ಸಭೆಯನ್ನು ಸೇರಿ ತರಗತಿಯ ಕೋಣೆಯಲ್ಲಿ ಪಾಠಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಭೆಯಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವುದು. ವಿಶೇಷ ದಿನಗಳು ಆಚರಣೆಗಳು ಇದ್ದಲ್ಲಿ ವಿಷಯ ಚರ್ಚಿಸಿ ಮಕ್ಕಳಿಂದ ಮಾಡಿಸಬಹುದಾದ ಚಟುವಟಿಕೆಗಳನ್ನು ಕ್ರೋಡೀಕರಿಸುವುದು. | ★ ಶಾಲಾ ಪಠ್ಯ ಭಾಗದಲ್ಲಿ ಕಂಡುಬಂದಂತಹ ತೊಂದರೆಗಳನ್ನು ಚರ್ಚಿಸಿ ಅದಕ್ಕೆ ಪರಿಹಾರ ಬೋಧನೆಯ ಯೋಜನೆಗಳನ್ನು ರೂಪೀಕ ರಿಸುವುದು. ಜೊತೆಗೆ ಅದನ್ನು ಕಾರ್ಯಗತಗೊಳಿಸುವುದು.<br>★ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಭಾವನಾತ್ಮಕ, ಮಾನಸಿಕ ,ಆರ್ಥಿಕ , ಶಾರೀರಿಕ, ಅಗತ್ಯತೆಗಳನ್ನು | 2025-26 | ಅಧ್ಯಪಕರು | June - March | ------ | |

| | | | | | | | | |
|---|---|---|---|---|---|---|---|---|
| | | | ಕಂಡುಕೊಳ್ಳುವುದು. | | | | | |
| 03 | ಮಾಹಿತಿ ತಂತ್ರಜ್ಞಾನ ಆಧಾರಿತ ಕಲಿಕೆ | ★ ತರಗತಿಯ ಪಾಠ ಭಾಗಕ್ಕೆ ಅನುಗುಣವಾಗಿ ಮಕ್ಕಳಿಗೆ ಐಟಿ ಆಧಾರಿತ ಕಲಿಕೆಯನ್ನು ಮುಂದುವರಿಸುವುದು.<br>★ ಬೇರೆಬೇರೆ ಸೃಜನಾತ್ಮಕ ಚಟುವಟಿಕೆಗಳ ಸಾಂಪಲ್ ಮಾದರಿ ವಿಡಿಯೋಗಳು ಯೂಟ್ಯೂಬ್ ಗಳಿಂದ ತೋರಿಸುವುದು<br>★ ದಿನಾಚರಣೆಗಳ ಮಹತ್ವವನ್ನು ಆಧಾರಿತವಾಗಿ ಮಕ್ಕಳಲ್ಲಿ ಮನವರಿಕೆ ಮಾಡಿಸಿಕೊಳ್ಳುವುದು<br>★ ಮಕ್ಕಳು ಬರೆದ ಬರವಣಿಗೆ ಪದ್ಯ ಕಥೆಗಳನ್ನು ವಾಚಿಸುವ ಓದುವ ಮೋಡಲ್ ವಿಡಿಯೋಗಳನ್ನು ತೋರಿಸುವುದು.<br>★ ಮೌಲ್ಯಾಧಾರಿತ ಸಿನಿಮಾಗಳನ್ನು ತೋರಿಸುವುದು | ★ ತರಗತಿಯ ಪಾಠ ಭಾಗಕ್ಕೆ ಸಂಬಂಧಿಸಿದ ಕಥೆ ಪದ್ಯಗಳನ್ನು ಸಂಭಾಷಣೆಯನ್ನು ತೋರಿಸುವುದು ಅದನ್ನು ವಿಶ್ಲೇಷಿಸಿ ಅರ್ಥೈಸುವುದು<br>★ ಕಲಿಕೋಪಕರಣ ಗಳನ್ನು ಬಳಸಿಕೊಂಡು ಬೇರೆಬೇರೆ ಸೃಜನಾತ್ಮಕ ಉತ್ಪನ್ನಗಳ ತಯಾರಿ ನಡೆಸುವುದು.<br>★ ಜೂನ್ ಒಂದನೇ ತಾರೀಕಿನಿಂದ ಮಾರ್ಚ್ 31 ನೇ ತಾರೀಕಿನವರೆಗೆ ಬರುವ ದಿನಾಚರಣೆಗಳ ಪಟ್ಟಿ ತಯಾರಿಸಿ ಅದರ ಮಹತ್ವವನ್ನು ಆಧಾರಿಸಿ ತಿಳಿಯಪಡಿಸುವುದು<br>★ ಮಕ್ಕಳಲ್ಲಿ ದಿನಾಚರಣೆ ಗಳಿಗೆ ಸಂಬಂಧಿಸಿದ poster ರಚನೆ ಶುಭಾಶಯ ಪತ್ರ ಮೊದಲಾದವುಗಳನ್ನು ತಯಾರಿಸಲು ಪ್ರೇರಣೆಯನ್ನು ಅಧ್ಯಾಪಕ ವೃಂದ ಒದಗಿಸಿಕೊಡುವುದು.<br>★ ಮಕ್ಕಳು ಶೈಕ್ಷಣಿಕ ವರ್ಷದಲ್ಲಿ ತಯಾರಿಸಿದ ಬೇರೆಬೇರೆ ಉತ್ಪನ್ನಗಳನ್ನು IT ಆಧಾರಿಸಿ ಪ್ರದರ್ಶಿಸುವುದು | 2025-26 | ಅಧ್ಯಪಕರು | June - March | 5000/- | ನೆಟ್ವರ್ಕಿನ ಸಮಸ್ಯೆ |
| 04 | Bullentin Board and Notice Board | ಮಕ್ಕಳ ಉತ್ಪನ್ನಗಳು ಮತ್ತು ಇತರ ಉತ್ಪನ್ನಗಳನ್ನು ಪ್ರದರ್ಶಿಸುವ | ಮಕ್ಕಳು ತರಗತಿಯಲ್ಲಿ ನಡೆಸಿದ ವಿವಿಧ ರೀತಿಯ ಚಟುವಟಿಕೆ ಉತ್ಪನ್ನಗಳನ್ನು | 2025-26 | ಅಧ್ಯಪಕರು & | June - March | 2000/- | |

| | | | | | | | | |
|---|---|---|---|---|---|---|---|---|
| | | ವೇದಿಕೆಯನ್ನು ನಿರ್ಮಿಸುವುದು. | ಶಾಲಾ Notice Board ಲ್ಲಿ ಪ್ರದರ್ಶಿಸುವುದು | | ಮಕ್ಕಳು | | | |
| 05 | ಮಕ್ಕಳಿಗೆ ಕಲಿಕೋಪಕರಣಗಳನ್ನು ಒದಗಿಸಿ ಕೊಡುವುದು. | ತರಗತಿ ಪಾಠ ಭಾಗಕ್ಕೆ ಸೂಕ್ತವಾದ ಕಲಿಕೋಪಕರಣ ಗಳನ್ನು ಒದಗಿಸಿಕೊಡುವುದು. | ★ ಪಾಠಕ್ಕೆ ಸಂಬಂಧಿಸಿದ ಕಲಿಕೋಪಕರಣ ಗಳನ್ನು ತರಗತಿಯಲ್ಲಿ ಮಕ್ಕಳಿಗೆ ಒದಗಿಸಿಕೊಡುವುದು.<br>★ ಮಕ್ಕಳು ತರಗತಿಯ ಪಾಠ ಭಾಗಕ್ಕೆ ಸಂಬಂಧಿಸಿ ಕಲಿಕೋಪಕರಣಗಳನ್ನು ತಯಾರಿಸುವುದು.<br>★ ಅಧ್ಯಾಪಕರು ಅದಕ್ಕೆ ಬೇಕಾದ ವಸ್ತುಗಳನ್ನು ಒದಗಿಸುವುದು.<br>★ ಮಕ್ಕಳು ಮನೆಯಲ್ಲಿ ಗಣಿತ ,ವಿಜ್ಞಾನ, ಭಾಷಾ ವಿಷಯಗಳ ಸಂಬಂಧಿಸಿದ ಕಲಿಕೋಪಕರಣ ಗಳನ್ನು ತಯಾರಿಸಲು ಬೇಕಾದ ವಸ್ತುಗಳನ್ನು ಕೊಡುವುದು.<br>ಅದನ್ನು ಮಾಡುವ ರೀತಿಯನ್ನು ತಿಳಿಸಲು ಕಾರ್ಯಾಗಾರಗಳನ್ನು ಏರ್ಪಾಡಿಸುವುದು. | 2025-26 | PTA, ಅಧ್ಯಪಕರು & ಮಕ್ಕಳು | June - March | 7000/- | |

| | | | | | | | | |
|---|---|---|---|---|---|---|---|---|
| 06 | ವಿಜ್ಞಾನ ಗಣಿತ ಭಾಷೆಗಳಿಗೆ ಪ್ರಯೋಗಾಲ ಯಗಳ ಸಾಧ್ಯತೆಯನ್ನು ಕಲ್ಪಿಸುವುದು. | ಮಕ್ಕಳ ಚಟುವಟಿಕೆಗಳನ್ನು ಪ್ರಾಯೋಗಿಕವಾಗಿ ನಡೆಸಲು ಯೋಜನೆಗಳನ್ನು ರೂಪೀಕರಿಸುವುದು. | ✯ ಮಕ್ಕಳ ಚಟುವಟಿಕೆಗಳ ಮುಂದುವರಿಕೆಗೆ ಬೇಕಾದ ಪ್ರಯೋಗಾಲಯಗಳನ್ನು ಉತ್ತಮಪಡಿಸಲು ಬೇಕಾಗಿ ಪ್ರಯೋಗಗಳನ್ನು ಸಜ್ಜುಗೊಳಿಸುವುದು. ಬೇಕಾದ ವಸ್ತುಗಳನ್ನು ಪ್ರಯೋಗಾಲಯದಲ್ಲಿ ಸೇರಿಸುವುದು.<br>✯ ಮಕ್ಕಳ ಮನೆಗಳಲ್ಲಿ ಪ್ರಾಯೋಗಿಕ ಲ್ಯಾಬ್ ಗಳನ್ನು ನಿರ್ಮಿಸುವ ಸಾಧ್ಯತೆಗಳನ್ನು ಕಂಡುಕೊಂಡು ಗಣಿತ-ವಿಜ್ಞಾನ ಭಾಷಾ ಲ್ಯಾಬ್ ಗಳನ್ನು ನಿರ್ಮಿಸುವುದು ಅದನ್ನು ಅಧ್ಯಾಪಕರು ಇತರ ವಿದ್ಯಾರ್ಥಿಗಳು ಸಂದರ್ಶಿಸುವುದು.<br>✯ ತರಗತಿಯಲ್ಲಿ ಮಕ್ಕಳಿಗೆ ಓದುವ ಮೂಲೆಗಳನ್ನು ನಿರ್ಮಿಸುವುದು ಭಾಷಾಪ್ರೌಢಿಮೆ ಹೆಚ್ಚುಗೊಳಿಸಲು ಬೇಕಾದ ಚಟುವಟಿಕೆಗಳನ್ನು ನೀಡುವುದು<br>✯ ನೀರಿನಲ್ಲಿ ನಡೆದಲ್ಲಿ ಬೆಳೆಸುವ ಔಷಧೀಯ ಸಸ್ಯಗಳು ಅದೇ ರೀತಿ ಬೇರೆಬೇರೆ ವೈಜ್ಞಾನಿಕ ಹೆಸರು ಪಡೆದಿರುವ ಅಂತಹ ಸಸ್ಯ ವರ್ಗವನ್ನು ಶಾಲಾ ವಾತಾವರಣದಲ್ಲಿ ಬೆಳೆಸುವುದು.<br>✯ ಶಾಲಾ ವಾತಾವರಣದಲ್ಲಿ ಒಂದು ಸ್ಥಳ ವನ್ನು ಕಂಡುಕೊಂಡು ಅಲ್ಲಿ ಗಣಿತ ಲ್ಯಾಬ್ ನ ನಿರ್ಮಾಣ ಮಾಡುವುದು. | 2024-25 | ಅಧ್ಯಾಪಕರು & ಮಕ್ಕಳು | June - March | 10000/- | |

| | | | | | | | | |
|---|---|---|---|---|---|---|---|---|
| | | | | | | | | |
| 07 | ಪರಿಸರಸ್ನೇಹಿ ವಿದ್ಯಾಲಯ , ತರಕಾರಿ ತೋಟ ನಿರ್ಮಾಣ<br><br>(ಜೈವ ಉದ್ಯಾನವನ) ಜೈವ ಸಂಸ್ಕರಣ ಘಟಕವನ್ನು ಸ್ಥಾಪಿಸುವುದು. | ★ ಶಾಲಾ ಪರಿಸರವನ್ನು ಪರಿಸರಸ್ನೇಹಿ ಗೊಳಿಸುವುದು<br>★ ಜೈವ ಉದ್ಯಾನವನ ನಿರ್ಮಾಣಕ್ಕೆ ಒತ್ತು ನೀಡುವುದು.<br>★ ಜೈವ ಸಂಸ್ಕರಣ ಘಟಕಕ್ಕೆ ಒತ್ತು ನೀಡುವುದು. | ★ ಪ್ಲಾಸ್ಟಿಕ್ ಮುಕ್ತ ಪರಿಸರ ಕ್ಕೆ ಆದ್ಯತೆ ನೀಡುವುದು.<br>★ ಶಾಲಾ ಪರಿಸರ ಸ್ನೇಹಿಯಾಗಿ ಶುಚಿತ್ವದ ಕಡೆಗೆ ಹೆಚ್ಚು ಒತ್ತು ನೀಡಿ ಮಕ್ಕಳಿಗೆ ಮಾನಿಟರಿಂಗ್ ಜವಾಬ್ದಾರಿಯನ್ನು ನೀಡುವುದು.<br>★ ಕಾರ್ಯಾಚರಣೆಯಲ್ಲಿರುವ ಉದ್ಯಾನವನವನ್ನು ಉತ್ತಮಪಡಿಸುವುದು.<br>★ ಜೈವ ಮತ್ತು ಜೈವಿಕ ವಸ್ತುಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು .ಆ ಮೂಲಕ ಪರಿಸರ ಚಟುವಟಿಕೆಗಳನ್ನು ಉತ್ತಮಪಡಿಸುವುದು. ಮಕ್ಕಳಿಗೆ ಅದರ monitoring ಜವಾಬ್ದಾರಿಗಳನ್ನು ನೀಡುವುದು.<br>★ ಶಾಲೆಯ ಸುತ್ತಮುತ್ತಲಿನ ಪರಿಸರ,ತರಗತಿ ಕೋಣೆಗಳು, ಅಡುಗೆ ಕೋಣೆ ,ಆಫೀಸ್ ಕೋಣೆ ಶೌಚಾಲಯ, ಕಡಿಯುವ ನೀರಿನ ಶುದ್ಧತೆಯನ್ನು ಕಾಪಾಡಿಕೊಳ್ಳುವುದು.<br>★ ತ್ಯಾಜ್ಯ ನೀರು ಹರಿದುಹೋಗುವ ಜಾಗಗಳಲ್ಲಿ ಬಾಳೆ, ತೆಂಗಿನ ಮರ, ಹಣ್ಣಿನ ಮರ ಸಸಿಗಳನ್ನು ನೆಟ್ಟು | 2025-26 | ಅಧ್ಯಪಕರು<br>&<br>ಮಕ್ಕಳು | June - March | 10000/- | |

| | | | | | | | | | |
|---|---|---|---|---|---|---|---|---|---|
| | | | ಬೆಳೆಸುವುದು.<br>★ ಮಕ್ಕಳಿಗೆ ಆಟವಾಡಲು ಆಟದ ಪಾರ್ಕ್ ನ ನಿರ್ಮಾಣ ಅವಶ್ಯಕತೆ ಯನ್ನು ಮನಗಂಡು ಕಾರ್ಯಾಚರಣೆಯಲ್ಲಿ ತೊಡಗುವುದು.<br>★ ವಿಶಾಲವಾದ ಜಾಗವನ್ನು ಆಯ್ದುಕೊಂಡು ತರಕಾರಿ ತೋಟವನ್ನು ಬೆಳೆಸುವುದು ಇದ್ದ ತರಕಾರಿ ತೋಟವನ್ನು ಉತ್ತಮಪಡಿಸುವುದು. 'ಶಾಲೆಯಲ್ಲೊಂದು ಕೈತೋಟ' 'ಮನೆಯಲ್ಲೊಂದು ಕೈತೋಟ ಎಂಬ ಸಾಧ್ಯತೆಯನ್ನು ಮನಗಂಡು ಕಾರ್ಯಾಚರಿಸುವುದು.<br>★ ಇದ್ದ ಹಣ್ಣಿನ ಮರಗಳು, ಹೂವಿನಗಿಡಗಳು, ಬಾಳೆಗಿಡಗಳು, ತೆಂಗಿನ ಮರಗಳನ್ನು ಪೋಷಿಸುವುದು ಮತ್ತು ಉತ್ತಮ ಫಲ ಬರುವಂತೆ ಬೇಕಾದ ಕಾರ್ಯಗಳನ್ನು ಕೈಗೊಳ್ಳುವುದು. | | | | | |
| 08 | ರಕ್ಷಕರ ಸಬಲೀಕರಣ ಕಾರ್ಯಕ್ರಮ | ರಕ್ಷಕರ ಜಾಗೃತಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದು | ಮಕ್ಕಳ ರಕ್ಷಕರಿಗೆ ಸಬಲೀಕರಣ ಕಾರ್ಯಕ್ರಮಗಳನ್ನು ನಡೆಸುವುದು ಮಕ್ಕಳ ಕಲಿಕಾ ಪ್ರಗತಿಗೆ ಬೇಕಾದ ಚಟುವಟಿಕೆಗಳನ್ನು ನಡೆಸಲು ಮಾರ್ಗದರ್ಶನಗಳನ್ನು ನೀಡುವುದು ಮನೆಯಲ್ಲಿ ಕಲಿಕಾ ವಾತಾವರಣವನ್ನು ಕಲ್ಪಿಸಲು ವ್ಯವಸ್ಥೆ ಕೈಗೊಳ್ಳುವುದು | 2025-26 | ಅಧ್ಯಪಕರು & ಮಕ್ಕಳು | June - March | 5000/- | |

| | | | | | | | | |
|---|---|---|---|---|---|---|---|---|
| 09 | ಶೈಕ್ಷಣಿಕ ಪ್ರವಾಸ | ಹೆತ್ತವರನ್ನು ಜೊತೆ ಸೇರಿಸಿ ಶೈಕ್ಷಣಿಕ ಪ್ರವಾಸ ವ್ಯವಸ್ಥೆ ಕಲ್ಪಿಸುವುದು | ಮಕ್ಕಳಿಗೆ ಶೈಕ್ಷಣಿಕ ಪ್ರವಾಸದ ವ್ಯವಸ್ಥೆ ಮಾಡುವುದು ಹೆತ್ತವರನ್ನು ಒಟ್ಟು ಸೇರಿಸಿಕೊಂಡು ಪ್ರವಾಸದ ಅನುಭವವನ್ನು ಉತ್ತಮಪಡಿಸುವ ಯೋಜನೆಯನ್ನು ಕೈಗೊಳ್ಳುವುದು | 2025-26 | SSG, ಅಧ್ಯಪಕರು & ಮಕ್ಕಳು | June - March | 10000/- | |
| 10 | ರಕ್ಷಕ-ಶಿಕ್ಷಕ ಕಾರ್ಯಕಾರಿ ಸಮಿತಿ | ಹೆತ್ತವರನ್ನು ಶಾಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು | ಮಕ್ಕಳ ಕಲಿಕಾ ಪುರೋಗತಿ ಯನ್ನು ಉತ್ತಮಪಡಿಸಲು ಹೆತ್ತವರ ಪಾಲ್ಗೊಳ್ಳುವಿಕೆಯನ್ನು PTA ಎಕ್ಸಿಕ್ಯೂಟಿವ್ ಗಳಲ್ಲಿ ಹೆಚ್ಚಿಸುವುದು ಉತ್ತಮ ಕಾರ್ಯಕ್ರಮಗಳನ್ನು ಹೆತ್ತವರಿಗಾಗಿ ಹಮ್ಮಿಕೊಳ್ಳುವುದು | 2025-26 | ಅಧ್ಯಪಕರು & ಮಕ್ಕಳು | June - March | 500/- | |
| 11 | ಮನೆ ಸಂದರ್ಶನ | ಮಕ್ಕಳ ಮನೆಗಳನ್ನು ಸಂದರ್ಶಿಸಿ ಅಧ್ಯಾಪಕರ ಹಾಗೂ ಹೆತ್ತವರ ಬಗ್ಗೆ ಉತ್ತಮ ಬಾಂಧವ್ಯವನ್ನು ಏರ್ಪಡಿಸುವುದು | ಅಧ್ಯಾಪಕರು ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಹೆಚ್ಚಿಸುವ ಉದ್ದೇಶದಿಂದ ಮನೆ ಸಂದೇಶದ ಕಾರ್ಯಕ್ರಮವನ್ನು ಇಟ್ಟುಕೊಳ್ಳುವುದು. | 2025-26 | ಅಧ್ಯಪಕರು | June - March | 2000/- | |
| 12 | English learning | ಇಂಗ್ಲಿಷ್ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ | ★ ಪ್ರಸಕ್ತ ಶಿಕ್ಷಣ ಪದ್ಧತಿಯಲ್ಲಿ ಇಂಗ್ಲಿಷ್ ಕಲಿಕೆಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಇಂಗ್ಲಿಷ್ ಪಾಠಕ್ಕೆ ಹೆಚ್ಚು ಒತ್ತು ನೀಡುವುದು.<br>★ English fest ಗಳನ್ನು ನಡೆಸುವುದು. | 2025-26 | ಅಧ್ಯಪಕರು | June - March | 2000/- | |

| | | | | | | | | |
|---|---|---|---|---|---|---|---|---|
| | Programme | ನೀಡುವುದು. | ★ ವಾರಕ್ಕೊಮ್ಮೆ English assembly ಯನ್ನು ನಡೆಸುವುದು .<br>★ English library ಪುಸ್ತಕಗಳನ್ನು ಹೆಚ್ಚು ಓದಲು ಅವಕಾಶ ನೀಡುವುದು.<br>★ ಬಾಲಸಭೆಯಲ್ಲಿ english acquisition programme ಗಳನ್ನು ಏರ್ಪಾಡಿಸುವುದು.<br>★ ಬಾಲ ಸಭೆಯಲ್ಲಿ ಇಂಗ್ಲೀಷ್ ಚಟುವಟಿಕೆ ಗಳನ್ನು ನಡೆಸುವುದು. | | | | | |
| 13 | ದಿನಾಚರಣೆಗಳ ಆಚರಣೆ | ವಿವಿಧ ದಿನಾಚರಣೆಗಳನ್ನು ಆಚರಿಸುವುದು. | ★ ಶಾಲೆಯಲ್ಲಿ ಜೂನ್ 1 ರಿಂದ ಮಾರ್ಚ್ 31 ರ ಮಧ್ಯೆ ಬರುವ ಬೇರೆ ಬೇರೆ ದಿನಾಚರಣೆ ಗಳನ್ನು ಆಚರಿಸುವುದು.<br>★ ಅದರ ಮಹತ್ವವನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವ ವ್ಯವಸ್ಥೆಗಳನ್ನು ಕಲ್ಪಿಸುವುದು<br>★ ದಿನಾಚರಣೆಯ ಭಾಗವಾಗಿ ಪೋಸ್ಟರ್ ,greeting ಕಾರ್ಡ್, ಟಿಪ್ಪಣಿ, ಹಾಡು ,ಕತೆ ,ವ್ಯಕ್ತಿಚಿತ್ರಗಳನ್ನು ತಯಾರಿಸುವುದು | 2025-26 | ಅಧ್ಯಾಪಕರು & ಮಕ್ಕಳು | June - March | 2000/- | |

| | | | | | | | | |
|---|---|---|---|---|---|---|---|---|
| | | | ಅದನ್ನು ಉತ್ತಮಪಡಿಸುವುದು ಅದರ ಮೂಲಕ ದಿನಾಚರಣೆಯ ಮಹತ್ವವನ್ನು ಪ್ರತಿ ವಿದ್ಯಾರ್ಥಿಯು ತಿಳಿದುಕೊಳ್ಳುವುದು. | | | | | |
| | Arabic learning Programme | ಅರೇಬಿಕ್ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು. | ☆ ಪ್ರಸಕ್ತ ಶಿಕ್ಷಣ ಪದ್ಧತಿಯಲ್ಲಿ ಅರೇಬಿಕ್ ಕಲಿಕೆಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಅರೇಬಿಕ್ ಪಾಠಕ್ಕೆ ಹೆಚ್ಚು ಒತ್ತು ನೀಡುವುದು.<br>☆ ARABIC DAY ಗಳನ್ನು ಆಚರಿಸುವುದು.<br>☆ ವಾರಕ್ಕೊಮ್ಮೆ ARABIC assembly ಯನ್ನು ನಡೆಸುವುದು .<br>☆ ARABIC library ಪುಸ್ತಕಗಳನ್ನು ಹೆಚ್ಚು ಓದಲು ಅವಕಾಶ ನೀಡುವುದು.<br>☆ ಬಾಲಸಭೆಯಲ್ಲಿ ARABIC acquisition programme ಗಳನ್ನು ಏರ್ಪಾಡಿಸುವುದು.<br>☆ ಬಾಲ ಸಭೆಯಲ್ಲಿ ಅರೇಬಿಕ್ ಚಟುವಟಿಕೆ ಗಳನ್ನು ನಡೆಸುವುದು. | 2025-26 | ಅಧ್ಯಾಪಕರು | June - March | 2000/- | |

| | | | | | | | | |
|---|---|---|---|---|---|---|---|---|
| 14 | ಕ್ಲಬ್ ಗಳ ರಚನೆ | ವಿಜ್ಞಾನ, ಗಣಿತ, ಪರಿಸರ, IT, ಆರೋಗ್ಯ ಕ್ಲಬ್ ಗಳ ರಚನೆ | ★ ವಿಜ್ಞಾನ ಕ್ಲಬ್ ನ ಮೂಲಕ ವಿಜ್ಞಾನ ಕಲಿಕೋಪಕರಣಗಳ ರಚನೆ ಮತ್ತು ತಯಾರಿ ,ವಿಜ್ಞಾನ ಮಾಡೆಲ್ ಗಳ ರಚನೆ, ವಿಜ್ಞಾನ ದಿನಾಚರಣೆ ಗಳನ್ನು ನಡೆಸುವುದು ಅದರ ಚಟುವಟಿಕೆಗಳನ್ನು ನೇತೃತ್ವವನ್ನು ವಹಿಸುವುದು.<br>★ IT ಕ್ಲಬ್ ಗಳ ಮೂಲಕ IT ಸಾಧ್ಯತೆಯನ್ನು ಹೆಚ್ಚಿಸುವುದು.<br>★ ಗಣಿತ ಕ್ಲಬ್ ನ ಮೂಲಕ ಗಣಿತ ಪಾಠ ಭಾಗಕ್ಕೆ ಬೇಕಾದ ಕಲಿಕೋಪಕರಣಗಳ ತಯಾರಿ,ಗಣಿತಶಾಸ್ತ್ರಜ್ಞರ ದಿನಾಚರಣೆ ಆಚರಿಸುವುದು , ಗಣಿತ ನಮೂನೆಗಳನ್ನು ತಯಾರಿಸುವುದು ಶಾಲಾ ಮಕ್ಕಳಿಗೆ ಅನುಕೂಲಕರವಾಗುವಂತೆ ಅದನ್ನು ಉಪಯೋಗಿಸಿಕೊಳ್ಳುವುದು.<br>★ ಆರೋಗ್ಯ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚೆ ನಡೆಸಿ ಆರೋಗ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುವುದು ಮತ್ತು ಮೌಲ್ಯಮಾಪನ ನಡೆಸುವುದು<br>★ ಆರೋಗ್ಯ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚೆ ನಡೆಸಿ ಆರೋಗ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು | 2025-26 | ಅಧ್ಯಪಕರು & ಮಕ್ಕಳು | June - March | 2000/- | |

| | | | | | | | | | |
|---|---|---|---|---|---|---|---|---|---|
| | | | ನಡೆಸುವುದು ಮತ್ತು ಮೌಲ್ಯಮಾಪನ ನಡೆಸುವುದು<br>★ ಪರಿಸರ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿಸುಕೊಳ್ಳುವುದು ಮತ್ತು ಪರಿಸರಕ್ಕೆ ಉಪಯೋಗವಾಗುವಂತಹ ಚಟುವಟಿಕೆಗಳನ್ನು ನಡೆಸುವುದು.<br>★ ಪರಿಸರ ಕ್ಲಬ್ ಗಳು ಪರಿಸರ ಕ್ಲಬ್ಬಿನ ಸಹಾಯದೊಂದಿಗೆ | | | | | | |

# GOVT. L P SCHOOL KANWATHIRTHA

**KUNJATHUR PADAVU**

# ಶೈಕ್ಷಣಿಕ ಮಂಡಲ

# 2025-2026

**glpskanwathirtha11210@gmail.com**